# ಅಮೃತಾ ಬರವಣಿಗೆಯ ಅಭೀಪ್ಸೆ



ಈಚಿನ ವರ್ಷಗಳಲ್ಲಿ ಕನ್ನಡ ಸಿನಿಮಾರಂಗ ಸಾಕಷ್ಟು ಬದಲಾವಣೆಗಳನ್ನು ಕಾಣುತ್ತಿದೆ. ಹಲವು ಧನಾತ್ಮಕ ಬೆಳವಣಿಗೆಗಳನ್ನೂ ಕಾಣುತ್ತಿದೆ. ಆದರೆ ಮಾನಸಿಕ ಸ್ವಾಸ್ಥ್ಯದ ಕುರಿತಂತೆ ಉತ್ತಮ ಕಥೆಗಳನ್ನು ಸಿನಿಮಾರಂಗ ಮಿಸ್ ಮಾಡಿಕೊಂಡಿದೆ ಎಂದಿದ್ದಾರೆ ನಟಿ ಅಮೃತಾ ಅಯ್ಯಂಗಾರ್.

ಸಿನಿಮಾಗಳಲ್ಲಿ ಮಾನಸಿಕ ಆರೋಗ್ಯದ ಪ್ರಾಮುಖ್ಯದ ಬಗ್ಗೆ ಮಾತನಾಡುತ್ತಾ, 'ನಮ್ಮ ಸಿನಿಮಾರಂಗದಲ್ಲಿ ಮಾನಸಿಕ ಅಸ್ವಸ್ಥತೆ ಎಂಬ ವಿಷಯವನ್ನು ಮೂಲೆಗೆ ಸರಿಸಲಾಗಿದೆ. ಅಥವಾ ಅದನ್ನು ತೋರಿಸುತ್ತಲೇ ಇಲ್ಲ ಎನ್ನಬಹುದು. ಉದಾಹರಣೆಗೆ, ಮಹಿಳಾ ಪಾತ್ರವೊಂದನ್ನು ಕೋಪ ಮಾಡಿಕೊಂಡಿರುವಂತೆ ತೋರುವುದಾದರೆ, ಆ ಕೋಪದ ಹಿಂದಿನ ಆಕೆಯ ನೋವು, ಅವಳು ಆ ರೀತಿ ವರ್ತಿಸಲು ಕಾರಣ ಏನೆಂಬುದನ್ನು ತೋರುವುದೇ ಇಲ್ಲ' ಎಂದು ವ್ಯಾಖ್ಯಾನಿಸಿದ್ದಾರೆ.

'ಫಾದರ್' ಸಿನಿಮಾದಲ್ಲಿ ಡಾರ್ಲಿಂಗ್ ಕೃಷ್ಣ ಜೊತೆ ನಟಿಸುತ್ತಿರುವ ಅಮೃತಾ ಅವರು, ಸ್ವತಃ ಸ್ಕ್ರಿಪ್ಟ್ ಒಂದನ್ನು ಬರೆಯುತ್ತಿರುವುದಾಗಿ ಹೇಳಿದ್ದಾರೆ.

'ಸಾಕಷ್ಟು ಜನರ ನಡುವೆ, ಅವರ ಕಷ್ಟಸುಖಗಳನ್ನು ನೋಡಿ ಬೆಳೆದ ನನ್ನಲ್ಲಿ ಹೇಳದೇ ಉಳಿದ ಹಲವು ಕಥೆಗಳಿವೆ. ನಟಿಯಾಗಿ ನಾನು ಕೆಲವು ಪಾತ್ರಗಳನ್ನು ನಿರ್ವಹಿಸಿದೆ. ಆದರೆ ಉತ್ತಮ ಅವಕಾಶಗಳು ಯಾವಾಗಲೂ ಸಿಗುವುದಿಲ್ಲ. ನಮ್ಮ ಸಾಮರ್ಥ್ಯವನ್ನು ಪರೀಕ್ಷಿಸುವಂಥ ಪಾತ್ರಗಳು ಅಪರೂಪ. ಹೀಗಾಗಿ ಪಾತ್ರವನ್ನು ನಾನೇ ಬರೆಯಬಹುದಲ್ಲ ಅನಿಸಿತು. ಬರವಣಿಗೆ ಪಾತ್ರಗಳನ್ನು ಅನುಭವಿಸುವಂತೆ ಮಾಡಿದೆ' ಎಂದಿದ್ದಾರೆ.

'ಭಾಷೆ ಹಾಗೂ ಕಂಟೆಂಟ್ ಹೊರತಾಗಿ ಬಹುಪಾಲು ಮಹಿಳಾ ಪಾತ್ರಗಳು ಗಮನಸೆಳೆಯುವಂತಿಲ್ಲ. ನಿರ್ದೇಶಕರು ಹೀರೊಗಳನ್ನಷ್ಟೇ ಮುಖ್ಯವಾಗಿಟ್ಟುಕೊಳ್ಳುತ್ತಾರೆ. ಮಹಿಳಾ ಪ್ರಧಾನ ಚಿತ್ರಗಳು ಥಿಯೇಟರ್‌ಗಳಲ್ಲಿ ಓಡುವುದಿಲ್ಲ ಎಂಬ ಕಲ್ಪನೆ ಈಗಲೂ ಸಿನಿಮಾರಂಗದಲ್ಲಿದೆ. ಪ್ರತಿ ಕಥೆಯಲ್ಲಿಯೂ ಮಹಿಳೆಯ ಪಾತ್ರವನ್ನು ತುಂಬಾ ಚೆನ್ನಾಗಿ ಸೃಷ್ಟಿಸುವ ಅವಕಾಶವಿರುತ್ತದೆ. ಆದರೆ ಅದು ಆಗುವುದಿಲ್ಲ. ಹೀರೊ ಹೀರೊಯಿನ್ ಪಾತ್ರಗಳು ಸಮತೋಲಿತವಾಗಿರುವುದಿಲ್ಲ' ಎಂದು ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿದ್ದಾರೆ.

ತಮ್ಮ ಬರವಣಿಗೆ ಬಗ್ಗೆ ಇನ್ನಷ್ಟು ವಿವರಿಸಿರುವ ಅವರು, 'ವೆಬ್ ಸೀರೀಸ್‌ಗಳನ್ನು ನೋಡುತ್ತಿದ್ದುದು ನನ್ನೊಳಗಿನ ಆಲೋಚನೆಗಳನ್ನು ಕಾರ್ಯರೂಪಕ್ಕೆ ತರಲು ಸಹಾಯ ಮಾಡಿದೆ. ಹಲವು ಭಾಷೆಯ, ದೇಶಗಳ ಸೀರೀಸ್‌ಗಳು ಕಥೆಯನ್ನು ಹೇಗೆ ಹೇಳಬಹುದು ಎಂಬುದಕ್ಕೆ ದಾರಿ ಮಾಡಿಕೊಟ್ಟಿವೆ' ಎಂದಿದ್ದಾರೆ.



## ರಿಷಿ ವಿಮರ್ಶೆ

**ಕನ್ನಡ** ಸಿನಿಮಾರಂಗದಲ್ಲಿ ತಾವು ಕಳೆದಿರುವ ಐದು ವರ್ಷಗಳು, ಬೆಳವಣಿಗೆ, ಸುದೀರ್ಘ ಪ್ರಯತ್ನ ಹಾಗೂ ಬದಲಾವಣೆಯ ಪಯಣ ಎಂದಿದ್ದಾರೆ ನಟ ರಿಷಿ. ಈಚೆಗೆ ರಿಷಿ ಅಭಿನಯದ ಐದನೇ ಸಿನಿಮಾ 'ರುದ್ರ ಗರುಡ ಪುರಾಣ' ಬಿಡುಗಡೆಯಾಗಿದ್ದು, ಈಗಲೂ ಮೊದಲ ಸಿನಿಮಾದ ಉತ್ಸುಕತೆಯನ್ನೇ ಉಳಿಸಿಕೊಂಡಿರುವುದಾಗಿ ಹೇಳಿದ್ದಾರೆ.

'ಪ್ರೇಕ್ಷಕರು ಸಿನಿಮಾ ನೋಡುವ ಆಯ್ಕೆ, ರೀತಿ ಬದಲಾಗಿದೆ. ಈಗ ಅವರಿಗೆ ಸಿನಿಮಾಗಳ ಬಗ್ಗೆ ಜ್ಞಾನವಿದೆ. ಹಾಗೇ ನಟರಾಗಿ ಗುಣಮಟ್ಟವನ್ನು ಹೆಚ್ಚಿಸಿಕೊಳ್ಳುವುದೂ ಈಗ ಅಗತ್ಯವಿದೆ' ಎಂದಿದ್ದಾರೆ.

ಸ್ಪರ್ಧೆಯ ವಾಸ್ತವಿಕತೆ ಹಾಗೂ ಪ್ರೇಕ್ಷಕರ ನಿರೀಕ್ಷೆಗಳಲ್ಲಿನ ಬದಲಾವಣೆಗಳ ನಡುವೆಯೂ ರಿಷಿ ತಮ್ಮ ಪಾತ್ರಗಳ ಬಗ್ಗೆ ಸದಾ ಆಶಾವಾದಿಯಾಗಿರುವುದಾಗಿ ಹೇಳಿದ್ದಾರೆ.

'ನಾನು ಮೊದಲ ಸಿನಿಮಾ ಮಾಡಿದಾಗ ನನ್ನ ಆಸೆ ಸರಳವಾಗಿತ್ತು– ಕಥೆಯನ್ನು ತನ್ನೊಂದಿಗೇ ಕರೆದುಕೊಂಡು ಹೋಗುವಂಥ ನಟನಾಗಬೇಕು ಎಂದು. ಅದನ್ನು ಸಾಧಿಸಿದೆ. ಈಗ ಸಮಾಜದಲ್ಲಿ ಬೆರೆಯುವಂಥ, ಜನರಲ್ಲಿ ಸ್ಫೂರ್ತಿ ತುಂಬುವಂಥ ಪಾತ್ರಗಳನ್ನು ಬಯಸುತ್ತಿದ್ದೇನೆ. ನಟನಾಗಿ ನಾನು ಸಮಾಜಕ್ಕೆ ಏನು ನೀಡಬಲ್ಲೆ? ಈ ಪ್ರಶ್ನೆಯನ್ನೇ ದಿನಾ ನಾನು ಕೇಳಿಕೊಳ್ಳುತ್ತೇನೆ' ಎಂದು ಹೇಳಿದ್ದಾರೆ.

''ರಿಷಿ ಯಾವ ರೀತಿಯ ನಟ ಆಗಿ ಗುರುತಿಸಿಕೊಳ್ಳಬೇಕು?' ಇದನ್ನು ನಾನಿನ್ನೂ ಕಂಡುಕೊಳ್ಳುತ್ತಿದ್ದೇನೆ. ಇದು ನಿರಂತರ ಪಯಣ. ಒಳ್ಳೆಯ ಸಿನಿಮಾಗಳ ಭಾಗಿಯಾಗಲು ನನಗೆ ಇಷ್ಟ. ನನ್ನ ಪಾತ್ರಗಳು ಅರ್ಥಗರ್ಭಿತವಾಗಿರಬೇಕು. ಸಮಾಜ ಹಾಗೂ ಮನರಂಜನಾ ಕ್ಷೇತ್ರ ಎರಡಕ್ಕೂ ನಾನು ನ್ಯಾಯ ಸಲ್ಲಿಸಬೇಕು ಎಂದು ಯೋಚಿಸುತ್ತೇನೆ'' ಎಂದಿದ್ದಾರೆ.